**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.335/2022**

| | | |
|---|---|---|
| ಸಾಕ್ಷಿದಾರರ ಹೆಸರು | : ರಘು ಆರ್. | ಪ್ರಾ.ಸಾ-3 |
| ತಂದೆಯ ಹೆಸರು | : ರಾಜು | ಚಾಸಾ-3 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎಸ್.ಡಿ.ಎ., | ದಿನಾಂಕಃ07.10.2024 |
| ವಾಸಸ್ಥಳ | : ತಾಲ್ಲೂಕು ಕಛೇರಿ, ತರೀಕೆರೆ. | |

**:ಮುಖ್ಯ ವಿಚಾರಣೆಃ ಪ್ರಾ.ಜ್ಞಾ.ಸ.ಸ.ಅ. ರವರಿಂದ:**

ನಾನು ದಿನಾಂಕಃ18.07.2011 ರಿಂದ ದಿನಾಂಕಃ30.08.2017 ರವರೆಗೆ ಮೂಡಿಗೆರೆ ತಾಲ್ಲೂಕು ಕಛೇರಿಯಲ್ಲಿ ಎಸ್.ಡಿ.ಎ., ಆಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕಃ25.03.2017 ರಂದು ಚಾಸಾ-2 ರವರು ಅಕ್ರಮ ಮರಳು ಸಾಗಾಣಿಕೆ ಸಂಬಂಧ 3 ಲಾರಿಗಳನ್ನು ಜಪ್ತುಪಡಿಸಿಕೊಂಡು ಕಛೇರಿ ಆವರಣಕ್ಕೆ ತಂದಿದ್ದರು. ಆ ಲಾರಿಗಳ ಪೈಕಿ ಕೆಎ-19-ಎಎ-7125, ಕೆಎ-14-ಎ-9994 ಮತ್ತು ಮತ್ತೊಂದು ಲಾರಿಯ ನೋಂದಣಿ ಸಂಖ್ಯೇ ಮರೆತು ಹೋಗಿದೆ. ಈ ವಿಚಾರವಾಗಿ ದಿನಾಂಕಃ04.04.2017 ರಂದು ಸಂಜೆ 5.30 ಗಂಟೆಗೆ ನಾನು ಆ ಸಮಯಕ್ಕೆ ತಹಶೀಲ್ದಾರ್ ಆಗಿದ್ದ ಚಾಸಾ-1 ರವರೊಂದಿಗೆ ಮೂಡಿಗೆರೆ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಚಾಸಾ-1 ರವರು ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ. ಅದೇ ದಿನ ಸಂಜೆ ಸುಮಾರು 6.15 ರಿಂದ 6.30 ರವರೆಗೆ ಪೊಲೀಸರು ತಾಲ್ಲೂಕು ಕಛೇರಿ ಆವರಣದಲ್ಲಿ ಮಹಜರ್ ಕ್ರಮ ಜರುಗಿಸಿ ಲಾರಿಗಳನ್ನು ಪಡೆದರು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕುಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅವಕಾಶ ನೀಡುವಂತೆ ಕೇಳಿದ ಮೇರೆಗೆ, ಅವಕಾಶ ನೀಡಲಾಯಿತು).

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರಿಂದಃ-**

ವಶಕ್ಕೆ ಪಡೆಯಲಾಗಿದ್ದ ಮತ್ತೊಂದು ಲಾರಿಯ ನೋಂದಣಿ ಸಂಖ್ಯೇ ಕೆಎ-35-ಬಿ-3786 ಅಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಎ., ವಕೀಲರಿಂದಃ**

ದಿನಾಂಕಃ25.03.2017 ರಂದು ನಾನು ಕರ್ತವ್ಯ ನಿರ್ವಹಿಸಿರುವ ಬಗ್ಗೆ ಕಛೇರಿಯಲ್ಲಿ ಹಾಜರಾತಿ ಪುಸ್ತಕ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ಪೊಲೀಸರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ. ಆ ದಿನ ಲಾರಿಗಳೊಂದಿಗೆ ಆರೋಪಿತರನ್ನು ನಿಲ್ಲಿಸಿ ಕಛೇರಿ ಆವರಣದಲ್ಲಿ ಫೋಟೋಗಳನ್ನು ತೆಗೆದಿಲ್ಲ. ಆ ದಿನ ನಾವು ಮಹಜರ್ ಬರೆದಿಲ್ಲ. ಪರ್ಮಿಟ್ ಅವಧಿ

ಮುಗಿದಿರುವ ಸಂಬಂಧ ದಾಖಲೆಗಳನ್ನು ನೋಡಿದ್ದೆ. ಆ ದಾಖಲೆಯನ್ನು ನಮ್ಮ ಇಲಾಖೆಯಿಂದ ನೀಡಲಾಗುವುದಿಲ್ಲ ಅಂದರೆ ಸರಿ. ಆ ದಿನ ಆರೋಪಿತರ ಹೆಸರು ಮತ್ತು ವಿಳಾಸಗಳನ್ನು ಪಡೆದುಕೊಂಡಿರುವುದಿಲ್ಲ. ದಿನಾಂಕಃ04.04.2017 ರಂದು ಚಾಸಾ-1 ರವರು ಸಲ್ಲಿಸಿದ ದೂರನ್ನು ನಾನು ನೋಡಿದ್ದೇನೆ. ದೂರಿನಲ್ಲಿ ವಾಹನದ ಮಾಲೀಕರ ಹೆಸರು ಹಾಗೂ ಆರೋಪಿತರ ಹೆಸರುಗಳನ್ನು ಬರೆಯಲಾಗಿತ್ತು. ನಾನು ಮೇಲಾಧಿಕಾರಿಗಳ ಮಾತು ಕೇಳಿ ದೂರು ಕೊಡಲಾಗಿದೆ ಹಾಗೂ ಮಹಜರ್ ಬರೆಯಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ಅಂಶಗಳು ಸುಳ್ಳು ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.